International Journal of Kannada Research
www.kannadajournal.com

ISSN: 2454–5813
IJKR 2021; 7(4): 160-162
© 2021 IJKR
www.kannadajournal.com
Received: 01-08-2021
Accepted: 03-09-2021

**Kanyakumari S**
Assistant Professor,
Department of Humanities,
M.S. Ramaiah Institute of
Technology, M.S.R. Nagar,
Bangalore, Karnataka, India

**Corresponding Author:**
**Kanyakumari S**
Assistant Professor,
Department of Humanities,
M.S. Ramaiah Institute of
Technology, M.S.R. Nagar,
Bangalore, Karnataka, India

# Vachana saahityadalli saamaajika aarivina chintanegaLu mattu mavdyategaLa khanDane

**Kanyakumari S**

**Abstract**
"Knowledge and science are indicators of developments"
Knowledge and science are not only indicators of development in human society but also a emblem of the progress of mankind and eradication of superstitious and blind believes. Ever science the origin of human society's science and literature have been the foundation of rational thinking and developments.
Through this presentation I would like to share some of the view points of contribution of literature for the development of mankind, with the reference of vachana sahitya and their contributions to society.

**Keywords:** vachana saahityadalli, saamaajika aarivina, mattu mavdyategaLa khanDane

## Introduction

**ಪ್ರಬಂಧದ ಸಾರಲೇಖ**

**ಶಿರ್ಷಿಕೆ: ;ವಚನ ಸಾಹಿತ್ಯದಲ್ಲಿ ಸಾಮಾಜಿಕ ಅರಿವಿನ ಚಿಂತನೆಗಳು ಮತ್ತು ಮೌಢ್ಯತೆಗಳ ಖಂಡನೆ:**

**ಲೇಖಕರು**

ಕನ್ಯಾಕುಮಾರಿ.ಎಸ್. ಸಹಾಯಕ ಪ್ರಾಧ್ಯಾಪಕರು. ಮಾನವೀಯ ವಿಜ್ಞಾನ ವಿಭಾಗ.
ಎಂ,ಎಸ್.ರಾಮಯ್ಯ ತಾಂತ್ರಿಕ ಮಹಾವಿದ್ಯಾಲಯ. ಬೆಂಗಳೂರು-೫೬೦೦೫೪.

ಪ್ರಬಂಧದ ಸಾರಲೇಖ

‶ಅರಿತು ಮಾಡುವುದು ಕ್ರಿಯೆ : ಅರಿಯದೆ ಮಾಡುವುದು ಕರ್ಮ, ಕ್ರಿಯೆಯಿಂದ ಸುಜ್ಞಾನ ಸ್ಫೂರಿಸುತ್ತದೆ:ಸುಜ್ಞಾನ ದಿಂದ ವಿಜ್ಞಾನ ವಿಸ್ತರಿಸುತ್ತದೆ. ‶ ಎಂಬ ನುಡಿಯಂತೆ ಜ್ಞಾನ ಮತ್ತು ವಿಜ್ಞಾನ ಮಾನವನ/ಸಮಾಜದ ಅಭಿವೃದ್ಧಿಯ ಸಂಕೇತಗಳಾಗಿಯಷ್ಟೇ ಅಲ್ಲದೆ, ಮೌಢ್ಯಗಳ ಅಳಿವಿಗೆ ಕಾರಣಗಳಗಿವೆ. ವಿಶ್ವದ ಪ್ರಗತಿಯ ದ್ಯೋತಕಗಳಾಗಿವೆ. ಮಾನವಸಮಾಜದ ಉಗಮವಾದಂದಿನಿಂದಲು ವಿವಿಧ ಹಂತಗಳಲ್ಲಿ ವಿಶ್ವ ಪ್ರಗತಿಯಲ್ಲಿ ಮುನ್ನೆಡೆಯುತ್ತಿರುವುದಕ್ಕೆ ಜ್ಞಾನ ಮತ್ತು ವಿಜ್ಞಾನ ಅಡಿಗಲ್ಲಾಗಿವೆ. ಈ ಹಿನ್ನೆಲೆಯಲ್ಲಿ ಸಾಹಿತ್ಯ ನೀಡಿರುವ ಕೊಡುಗೆ ಗಮನಾರ್ಹವಾಗಿದೆ.
ಕನ್ನಡ ಸಾಹಿತ್ಯದಲ್ಲಿ ಅದರಲ್ಲಿಯು ಹನ್ನೆರೆಡನೆ ಶತಮಾನದ ವಚನಸಾಹಿತ್ಯ ಸೃಷ್ಟಿಸಿದ ವೈಚಾರಿಕನಿಲುವುಗಳು ಮತ್ತು ಮೌಢ್ಯಗಳನ್ನು ಅಳಿದು ಸಾಮಾನ್ಯ ಜನರನ್ನು ಸುಜ್ಞಾನಿಗಳನ್ನಾಗಿ ಪರಿವರ್ತಿಸುವಂತಹ ಚಿಂತನೆಗಳು ಪ್ರಸ್ತುತ ಸಮಾಜಕ್ಕೆ ನಿದರ್ಶನಗಳಾಗಿವೆ. ಈ ಪ್ರಭಂದದಲ್ಲಿ, ವಚನ ಸಾಹತ್ಯದ ಮೂಲಕ ವಿಶ್ವಕ್ಕೆ/ ಸಮಾಜಕ್ಕೆ ನಿದರ್ಶನಗಳಾದ ಇಂಥಹ ಕೆಲವೊಂದು ವಿಚಾರಗಳನ್ನು ಚರ್ಚಿಸಲಾಗುತ್ತಿದೆ.

**ಪ್ರಬಂಧದ ವಿವರಣೆ**

**ಮುನ್ನುಡಿ:**

ವಚನ ಸಾಹಿತ್ಯ ೧೨ನೇ ಶಮಾನದಲ್ಲಿ ಜಾತಿ, ಧರ್ಮ, ವರ್ಣಾಶ್ರಮದ ವಿರುದ್ಧ ಬಂಡೆದ್ದು ಮಾನವ ಜಾತಿ, ಧರ್ಮ ಒಂದೇ ಎಂದು ಸಾರಿದ್ದಲ್ಲದೆ ಅದನ್ನು ನಿಜಜೀವನದಲ್ಲಿಯೂ ಕಾರ್ಯರೂಪಕ್ಕೆ ತಂದಿತು. ಬಸವಣ್ಣನವರ ನೇತೃತ್ವದಲ್ಲಿ ನಡೆದ ಶಿವಶರಣರ ವಚನ ಚಳುವಳಿ ಆತ್ಮಶುದ್ಧಿ ಹಾಗೂ ಕಾಯಕದ ಮಹತ್ತ್ವವನ್ನು ಜಗತ್ತಿಗೆ ತಿಳಿ ಹೇಳಿದ್ದಲ್ಲದೆ ಅದನ್ನು ಕಾರ್ಯಗತಗೊಳಿಸಿತು. ಈ ಚಳುವಳಿಯ ಶಿವಶರಣರ ನುಡಿಗಳೇ ಇಂದು ವಚನ ಎನ್ನುವ ಸಾಹಿತ್ಯ ಪ್ರಕಾರದಲ್ಲಿ ನಮ್ಮ ಮುಂದಿವೆ. ಈ ವಚನಗಳು ಉಚ್ಚಕುಲದವರ ಸ್ವತ್ತೆಂದು ಪರಿಗಣಿಸಲ್ಪಟ್ಟಿದ್ದ ಸಂಸ್ಕೃತದ ಸೋಂಕನ್ನು ತಗುಲಿಸಿಕೊಳ್ಳದೆ, ಛಂದಸ್ಸು, ಪ್ರಾಸ, ವ್ಯಾಕರಣದ ನಿಯಮಗಳ ಚೌಕಟ್ಟಿಲ್ಲದೆ ಈ ನೆಲದ ಸಾಮಾನ್ಯ ಜನರ ಆಡುಭಾಷೆಯಲ್ಲಿ, ಸೀದಾ ಸಾದಾ

ನೇರ ನುಡಿಗಳಲ್ಲಿ ರಚಿತಗೊಂಡಿವೆ. ಈ ವಚನಗಳು ಜನಸಾಮಾನ್ಯರ ನಿತ್ಯ ಜೀವನದಲ್ಲಿ ಹಾಸು ಹೊಕ್ಕಾಗಿರುವ ಸೂಕ್ಷ್ಮ ಸಮಸ್ಯೆಗಳ ಎಳೆಗಳನ್ನು ಮಾರ್ಮಿಕವಾಗಿ ತಿಳಿಸಿವೆ. ಅಂತಹವುಗಳಲ್ಲಿ ಮೂಢನಂಬಿಕೆಗಳೂ ಸೇರಿವೆ. ಮೂಢನಂಬಿಕೆಗಳು ಭಾರತೀಯ ಸಮಾಜದಲ್ಲಿ ಹಾಸುಹೊಕ್ಕಾಗಿದ್ದು, ಜನರ ಅಂಧಾನುಕರಣೆಯೇ ಇವುಗಳ ಹುಟ್ಟಿಗೆ ಕಾರಣವಾಗಿದೆ. ಜನರಲ್ಲಿದ್ದ ಅಂಧಾನುಕರಣೆಯನ್ನು ಕಂಡ ವಚನಕಾರರು ವಚನಗಳ ಮೂಲಕ ಜಾಗೃತಿ ಮೂಡಿಸುವಂತಹ ಕೆಲಸ ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ ವಚನ ಸಾಹಿತ್ಯದಲ್ಲಿ ಕಂಡುಬರುವ ಮೂಢನಂಬಿಕೆಗಳ ಕುರಿತಾದ ವಿಚಾರಗಳನ್ನು ಗುರುತಿಸುತ್ತಾ, ಅವುಗಳನ್ನು ಈ ಅಧ್ಯಯನದಲ್ಲಿ ವೈಜ್ಞಾನಿಕ/ ವೈಚಾರಿಕ ಹಿನ್ನೆಲೆಯಲ್ಲಿ ವಿಶ್ಲೇಷಣೆ ಮಾಡಲಾಗಿದೆ.

ವಚನ ಸಾಹಿತ್ಯದ ಮೂಲಕ ಸಾಮಾಜಿಕ ಹಾಗೂ ಧಾರ್ಮಿಕ ಮೌಢ್ಯಗಳನ್ನು ತೊಡೆದು ಹಾಕಲು ನಡೆಸಿರುವ ಕ್ರಾಂತಿ, ಸಂಘಟನೆಗಳು ಹಾಗು ಮೂಡಿಸಿದ ವೈಚಾರಿಕ ಪ್ರಜ್ಞೆ ಜನ ಜಾಗೃತಿಗಳನ್ನು ಮೂಲ ಆಧಾರವಾಗಿಟ್ಟುಕೊಂಡು ವರ್ತಮಾನಕ್ಕೆ ಅವಶ್ಯಕವಾದ ಸಾಮಾಜಿಕ ಬದಲಾವಣೆ ಹಾಗೂ ಅರಿವು ಮೂಡಿಸುವ ವಿಚಾರಗಳನ್ನು ರೂಪಿಸುವುದು ಈ ಲೇಖನದ ಮುಖ್ಯ ಆಶಯವಾಗಿದೆ.

**ವಚನ ಸಾಹಿತ್ಯದಲ್ಲಿ ಸಾಮಾಜಿಕ ಅರಿವಿನ ಚಿಂತನೆಗಳು: ಮತ್ತು ್ಲ ಮೌಢ್ಯತೆಗಳ ಖಂಡನೆ;**

ವಚನ ಸಾಹಿತ್ಯದ ವಿಶೇಷ ಗುಣವೆಂದರೆ ಸಾಮಾಜಿಕ ಬದುಕಿಗೆ, ಮೌಲ್ಯಗಳಿಗೆ ಬೆಲೆ ಕೊಡುತ್ತದೆ. ಹಾಗೆಯೇ ಮೌಢ್ಯಗಳನ್ನು ವಿರೋಧಿಸುತ್ತದೆ. ಅರಿವಿನ ಆಳದಲ್ಲಿ ಸಮಾಜದ ಆಗುಹೋಗುಗಳನ್ನು ಪರಾಮರ್ಶಿಸಿ ಜನತೆಯ ಮನದಲ್ಲಿ ಹುದುಗಿದ ಮೌಢ್ಯತೆಯನ್ನು ಕಳೆದು ತನ್ಮೂಲಕ ಅರಿವಿನ ಜ್ಯೋತಿಯನ್ನು ಬೆಳಗಿಸುವ ಕರೆಯನ್ನು ವಚನಗಳ ಮೂಲಕ ಕೊಡಲಾಗಿದೆ.

"ಸಾಮಾಜಿಕ ಅರಿವು- ಸಮಾಜದ ಅಭಿವೃದ್ಧಿಯ ಚಿಂತನೆಗೆ ಸಮಾನಾಗಿದೆ ಆದ್ದರಿಂದಲೇ ವಚನಕಾರರು ಸಮಾಜವನ್ನು, ಪರಿಸರವನ್ನು ತೆರೆದ ಕಣ್ಣಿನಿಂದ ನೋಡಿ ಸಮಾಜದಲ್ಲಿ ಬೇರುಬಿಟ್ಟಿದ್ದ ಕೊಳೆಯನ್ನು ತೊಳೆದು ಆರೋಗ್ಯವಂತ ಸಮಾಜಕ್ಕಾಗಿ ದುಡಿದು, ಇಡೀ ಮಾನವ ಸಮುದಾಯವನ್ನು ಅರಿವಿನ ಚಿಂತನೆಗೆ ತೊಡಗಿಸಿ, ಸಮಾಜದಲ್ಲಿ ತಾಂಡವ ವಾಡುತ್ತಿದ್ದ ಹುಸಿ, ಡಂಭ, ಅನ್ಯಾಯಗಳನ್ನು ನಿರ್ಭೆಡೆಯಿಂದ ಎತ್ತಿ ತೋರಿ ಸಾಮಾಜಿಕ ಅರಿವನ್ನು ಸ್ಥಾಪಿಸುವಲ್ಲಿ ಪ್ರಯತ್ನ ನಡೆಸಿ ಯಶಸ್ವಿಯಾದರು.

ಸಾಮಾಜಿಕ ಬದಲಾವಣೆಯ ಅಪಾರವಾದ ಕಾಳಜಿಯೊಂದಿಗೆ ಹೊಸ ಅಲೋಚನೆ ಉತ್ಸಾಹ ಗಳಿಂದ ಸುಭದ್ರ ಸಮಾಜ ನಿರ್ಮಾಣದ ಕನಸನ್ನು ಕಂಡು ಕಾಯಕದಿಂದಲೇ ಕೈಲಾಸವನ್ನು ಕಂಡುಕೊಂಡಿದ್ದು, ದೇಹವನ್ನೇದೇಗುಲವಾಗಿಸಿ, ಅಭಿವ್ಯಕ್ತಿಗಳನ್ನೇ ಅನುಭವ ಮಂಟಪವಾಗಿಸಿ, ಹೆಣ್ಣು-ಗಂಡು ಭೇದಭಾವವಿಲ್ಲದೆ. ಕುಲದ ತಾರತಮ್ಯ ಮಾಡದೆ, 'ಮೌಢ್ಯತೆ'ಗಳನ್ನು ಹೊರಹಾಕಿ, ಹೊಸ ಚಿಂತನೆಗಳನ್ನು ರೂಪಿಸಿ, ಸಮಾಜಕ್ಕೊಂದು 'ಅರಿವಿನ' ಸ್ವರೂಪವನ್ನಿತ್ತ ಆ ಸಂಧರ್ಭ ಇತಿಹಾಸದಲ್ಲಿಯೇ ಮಹತ್ವಪೂರ್ಣವಾದ ಕಾಲ.

ವಚನ ಸಾಹಿತ್ಯವು ಸೃಷ್ಟಿಸಿದ ಚಳುವಳಿಯು ಸಮಾಜೋ-ಧಾರ್ಮಿಕ ಸ್ವರೂಪದ್ದಾಗಿದ್ದು, ವಿಶಿಷ್ಠ ಮಹತ್ವವನ್ನು ಸಾಧಿಸಿತ್ತು. ಹಾಗಾಗಿ ಧರ್ಮ ಮತ್ತು ಸಮಾಜಗಳೆರಡರಲ್ಲೂ ಸಮತೋಲನವನ್ನು ಕಾಯ್ದುಕೊಂಡು ಸಾಮಾಜಿಕ ಮೌಢ್ಯ ಹಾಗು ದ್ವಂದ್ವತೆ ಗಳನ್ನು ತೊಡೆದುಹಾಕಲು ಒಂದು ಹೊಸ ಅರಿವಿನ ನೆಲೆಯನ್ನು ವಚನ ಸಾಹಿತ್ಯವು ಸೂಚಿಸುತ್ತದೆ. ಧಾರ್ಮಿಕ ಪ್ರಜ್ಞೆಯ ನೆಲೆಯಿಂದ ನೈತಿಕ ಪ್ರಜ್ಞೆಯ ನೆಲೆಗೆ ವಿವರಣೆಗಳನ್ನು ಪಲ್ಲಟಗೊಳಿಸಿ, ನೈತಿಕ ನಡವಳಿಕೆ ಮೂಲಕ ದೇವರನ್ನು ಸೇರಬಹುದು ಎಂಬ ಬಸವಣ್ಣನವರ ನುಡಿ-ನಂಬಿಕೆ ಅವರ ವಚನಗಳ ಜೊತೆಗೆ ಆಚರಣೆಗಳಲ್ಲಿ ಅಭಿವ್ಯಕ್ತವಾಗುವ ಆಚಾರವೇ ಸ್ವರ್ಗ, ಅನಾಚಾರವೇ ನರಕ ಮರ್ತ್ಯ ಲೋಕ, ದೇವಲೋಕ ಬೇರಿಲ್ಲ ಕಾಣಿರೋ ಎಂಬ ಸರಳ ನೀತಿಗಳು ಪ್ರತಿಬಿಂಬಿಸಿದವು.

ವಚನಕಾರರು ಅಂದಿನ ಸಮಾಜದಲ್ಲಿದ್ದ, ಕಂದಾಚಾರ-ಅಂಧಾನುಕರಣೆ, ಜಾತಿ-ಪದ್ಧತಿಗಳಿಗೆ ಪರ್ಯಾಯವಾದ ಒಂದು ಹೊಸವ್ಯವಸ್ಥೆಯ ಕನಸು ಕಂಡಿದ್ದವರು ಸಾಂಸ್ಕೃತಿಕವಾದ ಎಲ್ಲಾ ಅಂಶಗಳ ಕುರಿತು ಆಳವಾಗಿ ಆಲೋಚಿಸಿದ್ದವರು ಅವರ ಆಲೋಚನೆಯು ಕೇವಲ ವಿಚಾರಸೀಮಿತವಾಗಿರದೆ ಅನುಷ್ಠಾನಮುಖಿಯಾಗಿದ್ದವು. ಒಂದೆಡೆ- ವೈಯುಕ್ತಿಕ ತುರ್ತಿನ ಅಭಿವ್ಯಕ್ತಿ, ಮತ್ತೊಂದೆಡೆ- ಸಾಮೂಹಿಕ ಜರೂರಿನ ಬಗೆಗಿನ ಚರ್ಚೆ, ಈರೀತಿಯಾಗಿ ಸಾಮಾಜಿಕ ಬದಲಾವಣೆಯ ಮಹತ್ವದ ಗುರಿಯನ್ನಿರಿಸಿಕೊಂಡು, ರಚಿತವಾದ ವಚನ ಸಾಹಿತ್ಯದ ಚಿಂತನೆಯು ಮೌಢ್ಯಾಧಾರಿತ ಸಮಾಜದ ಬದಲಿಗೆ ಸಮಾನತೆಯ ನೆಲೆಯ ಮೌಢ್ಯರಹಿತ ಸಮಾಜಿಕ ವ್ಯವಸ್ಥೆಯ ಪರಿಕಲ್ಪನೆಯದ್ದಾಗಿತ್ತು.

ಸಾಮಾಜಿಕ ಬದುಕು ನಂಬಿದ್ದ ಧಾರ್ಮಿಕ ಮೌಲ್ಯಗಳಿಗಿಂತ ಬೇರೆ ರೀತಿಯಲ್ಲಿ ಕಂಡು ಬಂದಂತ ಆಚರಣೆ-ಪದ್ಧತಿಗಳು ಹಾಗೂ ಸಮಾಜದ ದಿಕ್ಕನ್ನು ತಪ್ಪಿಸುವಂತ ಮಾಢ್ಯತೆ ಗಳ ವಿರುದ್ಧ ಸಮಾಜವನ್ನು ಎಚ್ಚರಿಸುವ, ಬುದ್ಧಿ ಹೇಳುವ ಹೊಸ ಪ್ರಜ್ಞೆ ಮೂಡಿಸುವ, ಮತ್ತು ವಿಮರ್ಶಿಸುವ ಧೀರತೆಯನ್ನು, ಬದಲಾವಣೆಗಳನ್ನು ವಚನಕಾರರು ಪ್ರದರ್ಶಿಸಿದರು.

ನಾಳಿನ ದಿನಕಿಂದಿನ ದಿನ ಲೇಸೆಂದು ಹೇಳಿರಯ್ಯಾ ; ಕೂಡಲ ಸಂಗಮದೇವನ ಪೂಜಿಸಿದ ಫಲನಿಮ್ಮದಯ್ಯ

ಕೂಡಲ ಸಂಗಮನನ್ನು ಪೂಜಿಸಿ ಫಲ ಪಡೆದ ಶರಣರಿಗೆ ಎಲ್ಲಾ ಕಾಲವು ಶುಭ ಕಾಲವೇ. ಯಾವ ಗಳಿಗೆಯು ಅಶುಭವಲ್ಲ. ನಾಳೆಗೆಂದು ಮುಂದೂಡಿ ಇಂದಿನ ದಿನವನ್ನು ವ್ಯರ್ಥಮಾಡಿಕೊಳ್ಳುವುದೇ ಅಶುಭ ಎಂಬ ವಿಚಾರಗಳನ್ನು ಅಂದೇ ಪ್ರಸ್ತುತ ಪಡಿಸಿದ್ದಾರೆ. ಮೂಢನಂಬಿಕೆಗಳಿಗೆ ದಾಸರಾಗಿ ಎದ್ದರೆ-ಕೂತರೆ ಶಕುನ, ರಾಹುಕಾಲ, ಗುಳಿಕಾಲ ಯಮಗಂಡಕಾಲ ಮದಲಾದವುಗಳನ್ನು ವಿಚಾರಿಸುತ್ತಾ ತಮ್ಮ ನೆರಳಿಗೇ ತಾವು ಹೆದರುತ್ತಿದ್ದಂತ ಜನರನ್ನು ಕಂಡು ವಚನಕಾರರು- ಮೂಢನಂಬಿಕೆಗಳು ಅರ್ಥಹೀನವೆಂದು ಹೇಳಿ ವೈಚಾರಿಕತೆ ಬೆಳೆಸಿಕೊಳ್ಳುವಂತೆ ವೈಜ್ಞಾನಿಕವಾಗಿ ವಿಚಾರಮಾಡುವಂತೆ ವಿಚಿಕಿತ್ಸಕ ಬುದ್ಧಿಯನ್ನು ಜನರಲ್ಲಿ ಪ್ರೇರೆಪಿಸಿದರು.

ಶಕುನ, ಕಾಲ, ಘಳಿಗೆ, ನಕ್ಷತ್ರ-ತಿದಿ ಗಳೆಂದು ನಂಬಿ ಅಂಧಶ್ರದ್ಧೆಗೊಳಗಾದವರನ್ನು ಕುರಿತು ತಿಥಿ-ನಕ್ಷತ್ರ - ದಿನ- ಕಾಲ- ಸಮಯಗಳಿಗೆ ಅಳುಕದೆ ಅಂಧಾನುಕರಣೆ ಮಾಡದೆ, ಮತ್ತೊಬ್ಬರಿಗೆ ಅಂಜದೆ ಇರಬೇಕೆಂದು ವಿಚಾರಹೀನನಗಬಾರದೆಂಬ ಬುದ್ಧಿಮಾತು ಬಸವಣ್ಣನವರ ಈ ಕೆಳಗಿನ ವಚನದಲ್ಲಿದ್ದು, ಅಷ್ಟಮಿ, ನವಮಿ ಎಂಬ ಕಲ್ಪಿತವೇಕೋ ಶರಣಂಗೆ? ತಪ್ಪಿತ್ತು ಗಣಪದವಿ:

ಒಬ್ಬರಿಗಾಳಾಗಿ ಒಬ್ಬರನೋಲೈಸುವ, ನಿರ್ಬುದ್ಧಿ ಮನುಜರನೇನೆಂಬೆ ಕೂಡಲಸಂಗಮದೇವಾ:[1]

ಎಂಬಲ್ಲಿ ಮೌಢ್ಯಗಳಿಗೊಳಗಾಗಿ ಘನತರ ಪದವಿಗಳಿಂದ ವಂಚಿತರಾಗದ; ಶರಣನಾದವನು/ ಮತಿವಂತನಾದವನು /ನಿಷ್ಠಾವಂತವಾದವನು ತನ್ನ ತನವನ್ನು ಮರೆಯ ಬಾರದೆಂಬ ಅರಿವಿನ ತಿಳಿವು ನೀಡಿದ್ದಾರೆ ಹಾಗು ಒಬ್ಬರ ಆಳಾಗಿ ಅಂಧಾನುಕರಣೆ ಮಾಡುವುದನ್ನು ಬುದ್ಧಿ ಇಲ್ಲದ "ಮೂಢ'ತನವೆಂದು. ಅದು ವಿಚಾರ ಹೀನತೆ ಎಂದು ಸಮಾಜದಲ್ಲಿರುವ ಮೂಢತೆಯ ಬಗ್ಗೆ ಪ್ರಶ್ನಿಸಿ? ಜನತೆಯಲ್ಲಿ ಅರಿವಿನ ಚಿಂತನೆ ನೆಡೆಸಿದ್ದಾರೆ. ವೃತ- ನಿಯಮಗಳ ಆಚರಣೆಗಳಲ್ಲಿ ತಲ್ಲೀನರಾಗಿ ನೈಜತೆಯನ್ನು ಮರೆತ ಸಮಾಜವನ್ನು ಕುರಿತು ವೃತ ನಿಯಮಗಳು ಯಾವ ರೀತಿಯಲ್ಲಿರಬೇಕೆಂಬ ವೈಚಾರಿಕತೆಯ ಹೊಸ ಅರ್ಥವನ್ನು ನೀಡುತ್ತಾರೆ.

ಮೂಢಾಚರಣೆಗಳಿಗೆ ಬದಲಾಗಿ ವ್ಯಕ್ತಿಗತವಾದ ಆಚರಣೆಗಳನ್ನು, ಸತ್ಯವನ್ನು ಅರಿತು ನೆಡೆಯುವಂತ ಆಚರಣೆಗಳನ್ನು ರೂಢಿಗತವಾಗಿಸಿ ಕೊಳ್ಳುವುದಾದರೆ ಅಂತಹ ವೃತಗಳು ದೇವರನ್ನು ಮೆಚ್ಚಿಸುವಲ್ಲಿ ಸಂದೇಹವಿಲ್ಲವೆಂದು ಮೂಢಾಚರಣೆ ಗಳನ್ನು ಖಂಡಿಸಿ, ವೈಚಾರಿಕ ರೀತಿಯನ್ನು ಅರುಹಿದ್ದಾರೆ.

೧ .ಬಸವಣನ ನವರ ವಚನಗಳು

ಪರಧನವನೊಲ್ಲದಿಪ್ಪುದೇ ವ್ರತ, ಪರಸ್ತ್ರೀಯ ಕೊಡದಿಪ್ಪುದೇ ಶೀಲ; ಸರ್ವಜೀವವ ಕೊಲ್ಲದಿಪ್ಪುದೇ ನೇಮ, ಸತ್ಯವ ಮಿತ್ಯವ ತಿಳಿದಿಪ್ಪುದೇ ನಿತ್ಯನೇಮ:

ಇದು ಈಶಾನ್ಯ ಮುರ್ತಿ ಮಲ್ಲಿಕಾರ್ಜುನ ಲಿಂಗಕ್ಕೆ ಸಂದೇಹವಿಲ್ಲದ ವ್ರತವೆಂದು ಹೇಳುತ್ತಾರೆ.

ಪರಧನ, ಪರಸ್ತ್ರೀ ವ್ಯಾಮೋಹವನ್ನು ತೊರೆಯುವುದೇ ವ್ರತವೆಂದು ,ಅರಿಷಡ್ವರ್ಗಗಳ ದಾಸನಾಗಿ 'ಮೂಢತೆ' ಯಿಂದ ಪ್ರಾಪಂಚಿಕ ಸುಖವನ್ನರಿಸುವ ಮನುಷ್ಯ ಸಮಾಜದ ಒಳಿತಿಗಾಗಿ ಚಿಂತಿಸುವುದಂತಿರಲಿ ತನ್ನನ್ನು ತಾನೇ ನಿಯಂತ್ರಿಸಿಕೊಳ್ಳದಂತಾಗುತ್ತಾನೆಂಬ ಚಿಂತನೆ ಇಲ್ಲಿದೆ, ಆದ್ದರಿಂದ ವ್ಯಕ್ತಿ ಸ್ವಯಂಕಲ್ಪಿತ ನೇಮಗಳನ್ನು ಅಳವಡಿಸಿಕೊಂಡರೆ ಮಹತ್ತರವಾದ ವ್ರತವನ್ನು ಮಾಡಿದಂತೆ ಎಂದು ಹೇಳುವಲ್ಲಿ ಸರಳವಾದ, ಅರ್ಥಪೂರ್ಣವಾದ ತಿಳುವಳಿಕೆಯನ್ನು ನೀಡಲಾಗಿದೆ.

ಕಂಧಾಚಾರಗಳನ್ನು ಶಿದಿಲಗೊಳಿಸಿ, ಜೀವ೦ತ ಸಮಾಜದ ಬೆಳವಣಿಗೆಗೆ ಬೇಕಾದ ನೈಜ ನೇಮಗಳನ್ನು ಮೈಗೂಢಿಸಿಕೊಳ್ಳುವ೦ತ ವಿಚಾರವನ್ನು ತಿಳಿಯಪಡಿಸಿದ್ದಾರೆ.

ಕಲ್ಲ ನಾಗರ ಕಂಡರೆ ಹಾಲನೆರೆ ಯೆಂಬರಯ್ಯಾ, ದಿಟದ ನಾಗರ ಕಂಡರೆ ಕೊಲ್ಲೆಂಬರಯ್ಯಾ , ಎಂದು ಬಸವಣ್ಣ 12ನೇ ಶತಮಾನದಲ್ಲಿಯೇ ಸಮಾಜದಲ್ಲಿದ್ದ ಮೌಢ್ಯವನ್ನು ವಿಢಂಬಿಸಿದ್ದರು.

ಮೌಢ್ಯತೆಗಳನ್ನು ಟೀಕಿಸಿ ಅಲ್ಲಗಳೆದು ವೈಜ್ಞಾನಿಕತೆ ನೆಲೆಯಲ್ಲಿ ವಿಚಾರವಂತ ಸಮಾಜವನ್ನಾಗಿ ಪರಿವರ್ತಿಸಲು ಕೈಗೊಂಡ ಮಾರ್ಗ ತೋರಿಕೆಯದ್ದಾಗಿರದೇ ನೈಜರೂಪ್ಪದಲ್ಲಿದ್ದು ಕ್ರಾಂತಿಯಾಗಿ ರೂಪಗೊಂಡಿದ್ದು ಅವಿಸ್ಮರಣೀಯವಾದದ್ದು[2]. ಬಸವಣ್ಣನವರ೦ತ ವಚನಕಾರರು ಜಾತಿ-ಪದ್ಧತಿ ಮುಂತಾದ ಕಟ್ಟು ನಿಟ್ಟಾದ ಸಾಮಾಜಿಕ ವ್ಯವಸ್ಥೆಗಳನ್ನು, ಸ್ವರ್ಗ-ನರಕಗಳ ಕಲ್ಪನೆಯನ್ನು ವೈಚಾರಿಕ ನೆಲೆಯಲ್ಲಿ ಪರೀಕ್ಷಿಸ ತೊಡಗಿದರು

ಕೈಲಾಸ ಮರ್ತ್ಯಲೋಕ ದೇವಲೋಕ-ಸುರಲೋಕ ಗಳೆಂಬ ನಂಬಿಕೆ, ವ್ಯತ್ಯಾಸಗಳನ್ನು ಖಂಡನೆ ಗೊಳಿಸಿ, ದೇವಲೋಕ ಮರ್ತ್ಯಲೋಕ ಬೇರಿಲ್ಲ ಕಾಣಿರೋ, ಸತ್ಯವ ನುಡಿವುದೇ ಸ್ವರ್ಗ, ಮಿತ್ಯವ ನುಡಿಯುವುದೇ ನರಕ ಎಂದಿದ್ದಾರೆ.

ಜಾತಿ-ಕುಲ ವೆಂಬ ವ್ಯವಸ್ಥೆ, ಅದನ್ನನುಸರಿಸಿದ ಅ೦ಧಾಭಿಮಾನಗಳನ್ನು ಶೈಥಿಲ್ಯ ಗೊಳಿಸಲು ಕರ್ಮಸಿದ್ಧಾಂತ ಹಾಗು ಕಾಯಕ ತತ್ವ ಗಳನ್ನು ಭಿತ್ತಿದರು, 'ಕಾಯಕ ವೇ ಕೈಲಾಸ ಎಂಬ ಜೀವನಾದರ್ಶದ ನುಡಿಗಳು ವಚನಗಳಲ್ಲಿ ಪ್ರತಿಬಿಂಬಿಸಿದವು, ಕುಲಕಸುಬು ಜಾತಿಯಾಧಾರಿತ ಉದ್ಯೋಗ ವ್ಯವಸ್ಥೆ ಪ್ರಧಾನವಾಗಿದ್ದು, ಜಾತಿವ್ಯವಸ್ಥೆ ನೆಲೆಯಲ್ಲಿ ವೃತ್ತಿ ತಾರತಮ್ಯವಿದ್ದ ಅಂದಿನ ಸಮಾಜದಲ್ಲಿ ವ್ಯಕ್ತಿ ಸಮಾನತೆಯನ್ನು ಹಾಗೂ ಎಲ್ಲ ವೃತ್ತಿಗಳ ಮಹತ್ವವನ್ನು ಸಮಾಜಕ್ಕೆ ಎತ್ತಿ ತೋರಿಸುವ ಉದ್ದೇಶದಿಂದ 'ಕಾಯಕ' ತತ್ವವನ್ನು ರೂಪಿಸಿ, ಕಾಯಕ ಮಾಡುವುದು ಕೈಲಾಸಕ್ಕೆ ಸಮಾನವೆಂದು ಹೇಳಲಾಯಿತು.

"ಜೀವನಾವಶ್ಯಕ ವೃತ್ತಿಗೆ ಆಧ್ಯಾತ್ಮಿಕ ಲೇಪನವನ್ನು ಮಾಡಿ, ಅದನ್ನೇ 'ಕಾಯಕ' ಎಂಬ ಪರಿಕಲ್ಪನೆಯಾಗಿ ಜನರ ಮುಂದಿಟ್ಟರು, ಅಲ್ಲದೆ ಸಮಾಜದ ಒಳಿತಿಗಾಗಿ ವೈಯುಕ್ತಿಕ ಹಿತಾಸಕ್ತಿಗಳನ್ನು ತೊರೆದು ವರ್ಗಗಳ ಯೋಗಕ್ಷೇಮ ನೋಡಿಕೊಳ್ಳುವ ಜವಾಬ್ದಾರಿ ಸಮಾಜದ್ದೆಂದು ಪರಿಗಣಿಸಿ ಕಾಯಕ ತತ್ವಕ್ಕೆ ಪೂರಕವಾದ ದಾಸೋಹ' ಪರಿಕಲ್ಪನೆ ಮುಂದಿಟ್ಟರು.[3]

ಶರಣರು ಜನಸಾಮಾನ್ಯರಿಗೆ ಕೇವಲ ಆದರ್ಶವಾಗಿ ಉಳಿಯುವ ಮಾತನ್ನು ಹೇಳಲಿಲ್ಲ. ದೈನಂದಿನ ಜೀವನಕ್ಕೆ ಅಗತ್ಯವಾದ ದುಡಿಮೆ ಮತ್ತು ದುಡಿದುದನ್ನು ಹಂಚಿತಿನ್ನುವ, ಅಹಂಕಾರವನ್ನು ಕಳೆದುಕೊಂಡು ದಾಸೋಹ ಭಾವದಿಂದ ಸಮಾಜಕ್ಕೆ ಅರ್ಪಿಸುವ ತತ್ವಗಳನ್ನು ಹಾಗು ಇಂದಿನ ಯುಗದಲ್ಲೂ ಸಾಧಿಸಬಹುದಾದ ಮಾರ್ಗಗಳನ್ನು ತಿಳಿಸಿಕೊಟ್ಟರು.

ಶ್ರೇಣಿಕೃತ ಸಮಾಜವನ್ನು ಪೋಷಿಸಿದ್ದ ಕರ್ಮಸಿದ್ಧಾಂತ ವನ್ನು ವಿರೋಧಿಸಿ ಕಾಯಕ ಸಿದ್ಧಾಂತವನ್ನು ಪರಿಚಯಿಸಿದರು. ಹುಟ್ಟಿನ ಆದಾರದ ಮೇಲೆ ನಿಂತಿದ್ದ ಕುಲಕಸುಬು, ಜಾತಿ-ವರ್ಣ ಭೇದ ನಿಯಮಗಳನ್ನು ನಿರಾಕರಿಸಿ, ವ್ಯಕ್ತಿ ಯಾವುದೇ ವೃತ್ತಿಯನ್ನು ಜೀವನ ನಿರ್ವಹಣೆಗಾಗಿ ಆಯ್ದುಕೊಳ್ಳುವ ಕಾಯಕ ತತ್ವವನ್ನು ಅನುಕರಣೆಗೆ ತರಲಾಯಿತು.

"ವ್ಯಕ್ತಿ ಶುದ್ಧನಾಗದೆ ಸಮಾಜ ಶುದ್ಧವಾಗದು' ಎಂದು ನಂಬಿದ್ದ ಬಸವಣ್ಣನವರು ಅಂತರಂಗ ಬಹಿರಂಗ ಶುದ್ಧಿಗಳನ್ನೇ ತಮ್ಮ ಧರ್ಮದ ಜೀವಾಳವನ್ನಾಗಿ ಮಾಡಿಕೊಂಡು ವಚನಗಳನ್ನು ರಚಿಸಿದರು. [4]

ಹನ್ನೆರಡನೆಯ ಶತಮಾನದ ವಚನಕಾರರ ಆಂದೋಲನವು ಸಮಾಜ ಮುಖಿಯಾಗಿದ್ದು ಸಮಾಜದ ಸ್ವರೂಪದ ಬಗ್ಗೆ ಚಿಂತಿಸಿದರು, ಸಮಾಜದ ಸರ್ವತೋಮುಖ ಬೆಳವಣಿಗೆಗೆ ವಚನ ಸಾಹಿತ್ಯದ ಚಿಂತನೆಗಳು ಮಾರ್ಗದರ್ಶನಗಳಂತಿವೆ, ವಚನ ಸಾಹಿತ್ಯದ ವಿಶಿಷ್ಟತೆ ಎಂದರೆ ಜನಸಾಮಾನ್ಯರನ್ನು ಚಿಂತನಶೀಲರನ್ನಾಗಿ ,ವಿಚಾರವಂತರನ್ನಾಗಿಸುವುದು ಎನ್ನುವುದು ಗಮನೀಯವಾದ ಅಂಶ. ಇಂಥಹ ಚಿಂತನೆ - ವಿಚಾರಗಳನ್ನೊಳಗೊಂಡ ವಚನ ಸಾಹಿತ್ಯ ಒಂದು ಧರ್ಮ-ಸಮಾಜ-ಕಾಲ ಅಥವಾ ಶತಮಾನಕ್ಕೆ ಸೀಮಿತವಾದ ಸಾಹಿತ್ಯವಾಗಿರದೆ, ಇಡೀ ಮಾನವ ಕುಲದ ಉದ್ಧಾರ ಬಯಸುವ ಸಾಹಿತ್ಯದ ಕೃಷಿಯಾಗಿದೆ ಪ್ರಸ್ತುತ ಸಮಾಜಕ್ಕೂ , ಎಂದೆಂದಿಗು ಮಾದರಿಯಾದ ಜ್ಞಾನ ದೀವಿಗೆಯಾಗಿದೆ.

ಜ್ಞಾನದ ಬೆಳಕಿನಿಂದ ಅಜ್ಞಾನದ ಕೇಡು ನೋಡಯ್ಯ ಎನ್ನುವ ವಚನದ ಸಾರದಂತೆ ಸಾಹಿತ್ಯದ ಕೊಡುಗೆ ಮಾನವ ಚಿಂತನೆಗಳನ್ನು ವಿಸ್ತರಿಸಿ ವಿಚಾರ ಪರರನ್ನಾಗಿ ವೈಚಾರಿಕನಿಲುವುಗಳನ್ನು ರೂಢಿಸಿಕೊಳ್ಳಲು, ಕ್ರಿಯಾಶೀಲರನ್ನಾಗಿಸಲು ಹೇಗೆ ಸಹಕಾರಿಯಾಗಿದೆಯೋ. ಹಾಗೆಯೇ, ವಿಜ್ಞಾನದ ಪ್ರಾಯೋಗಿಕ ಬೆಳವಣಿಗೆ ಹೊಸ ಚಿಂತನೆಗಳಿಗೆ, ಅವಿಷ್ಕಾರಗಳಿಗೆ ಪ್ರೋತ್ಸಾಹ ನೀಡುತ್ತಿದೆ.

ಒಟ್ಟಾರೆ ಹೇಳುವುದಾದರೆ ಸಮಾಜದ ಸರ್ವತೋಮುಖ ಅಭಿವೃದ್ಧಿಗೆ ಜ್ಞಾನ ಮತ್ತು ವಿಜ್ಞಾನ ಗಳ ತಿಳುವಳಿಕೆ ನಿರಂತರವಾದದ್ದು, ಆಯಾ ಕಾಲಘಟ್ಟದ ಸಾಹಿತ್ಯದ ಚಿಂತನೆಗಳು ಮತ್ತು ಅನುಭವ ಜ್ಞಾನ ಗಳು ವೈಚಾರಿಕತೆಗೆ/ಜ್ಞಾನರ್ಜನೆಗೆ ತಮ್ಮದೆ ಆದ ವಿಶಷ್ಟ ಕೊಡುಗೆಗಳಗಿವೆ.ಎಂದರೆ ತಪ್ಪಾಗಲಾರದು.

## ಸಮಾರೋಪ

ಆಧುನಿಕ ವಿಜ್ಞಾನ ತಂತ್ರಜ್ಞಾನ ಜ್ಞಾನಗಳ ಜೊತೆಗೆ ಸಾಹಿತ್ಯದ ಮೂಲವಾದ ಲೌಕಿಕ ಜ್ಞಾನವನ್ನು ಸೇರ್ಪಡಿಸಿಕೊಂಡು ಸಾಮಾಜಿಕ ಪರಿವರ್ತನೆಯ ಮಂತ್ರವನ್ನು ನೆಲೆಯಾಗಿಸಿಕೊಂಡು ವೈಚಾರಿಕತೆಯ ದೃಷ್ಟಿಯಲ್ಲಿ ವಿವೇಚಿಸಿ ಮೌಢ್ಯರಹಿತ ಆಧುನಿಕ ಸಮಾಜವನ್ನು ರೂಪಿಸುವ ಅಂಶಗಳನ್ನು- ವಚನ ಸಾಹಿತ್ಯವು ನೀಡಿರುವ ಅನುಭವ ಜ್ಞಾನದಿಂದ ಆಯ್ದ ಕೆಲವು ವಿಚಾರಗಳ ಮೂಲಕ ಈ ಅಂಕಣದಲ್ಲಿ ಪ್ರಸ್ತುತ ಪಡಿಸಲಾಗಿದೆ.

## ಪರಾಮರ್ಶನ ಗ್ರಂಥಗಳು


1. ಡಾ.ಎಸ್. ಶಿವರಾಜಪ್ಪನವರ ಸಮಗ್ರ ಸಾಹಿತ್ಯ-1 ಚಿಂತನಾಪಥ - ಪುಟ-606, ಪ್ರಸಾದ್ ಎಜೇನ್ಸಿ-2009.
2. ಪಿ.ವಿ ನಾರಾಯಣ- ವಚನ ಸಮುಗ್ರ, ಪುಟ; 105, ವಸಂತಪ್ರಕಾಶನ 2005
3. ಅನ್ನಧಾನಯ್ಯ ಪುರಾಣಿಕ, ಚನ್ನಬಸವಣ್ಣನು ನಿರೂಪಿಸಿರುವ ಆಚಾರಗಳು, ಬಸವಪಥ-ಬೆಳ್ಳಿಬೆಳಗು ಪುಟ: 313, ಬಸವ ಸಮಿತಿ- 2003
4. ಚಿದಾನಂದ ಮೂರ್ತಿ. ಎಂ. - ವಚನ ಸಾಹಿತ್ಯ-ಬಸವಣನ ನವರ ವಚನಗಳು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು 1975
5. ತಿಪ್ಪೆರುದ್ರಸ್ವಾಮಿ.ಎಚ್, -ವಚನ ಸಾಹಿತ್ಯ ವೈಚಾರಿಕ ಅಧ್ಯಯನ, ಪ್ರಸಾರಂಗ ಕರ್ನಾಟಕ, ವಿಶ್ವವಿದ್ಯಾಲಯ, ಧಾರವಾಡ-1983